ಶ್ರೀ ಯು. ಭೂಪತಿ.—ನನಗೆ ಕೊಟ್ಟಿರುವ ಉತ್ತರ ಬೇರೆ, ಅವರಿಗೆ ಕೊಟ್ಟಿರುವ ಉತ್ತರ ಬೇರೆ. ಎರಡೂ ಒಂದೇ ಅಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ —ಮಾನ್ಯ ಸದಸ್ಯರು ಆಬ್ಸೆಂಟ್ ಇದ್ದರು. ಪುನಃ ಅದೇ ಪ್ರಶ್ನೆಗೆ ಸಮಯ ತೆಗೆದುಕೊಳ್ಳುವುದು ಒಳ್ಳೆಯದಲ್ಲ.

ಶ್ರೀ ಯು. ಭೂಪತಿ —ನನ್ನ ಪ್ರಶ್ನೆ.....

ಅಧ್ಯಕ್ಷರು.—ನೀವು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. Nothing will go on record. ಮಾನ್ಯ ಕೃಷ್ಣನ್ ಅವರೇ ನೀವು ಸರಿಯಾಗಿ ಗೈಡ್ ಮಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಅವಗಿಗೆ ಅವಕಾಶ ಮಾಡಿಕೊಡಿ.

ಪ್ರಕಟಣೆಗಳು

ಅಧ್ಯಕ್ಷರು.—ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಈ ಕೆಳಕಂಡ ವಿಧೇಯಕಗಳನ್ನು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.

೧) ೧೯೮೭ನೇ ಇಸವಿಯ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ.

೨) ೧೯೮೭ನೇ ಇಸವಿಯ ಅಬಕಾರಿ (ಎರಡನೇ ತಿದ್ದುಪಡಿ) ವಿಧೇಯಕ.

೩) ೧೯೮೭ನೇ ಇಸವಿಯ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕ.

ಪ್ರಕಟಣೆ–೨

———

ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ಕೋಲಾರ, ಇವರಿಂದ ಈ ಕೆಳಕಂಡ ಸಂದೇಶ ನನಗೆ ಬಂದಿದೆ.

ವಿಧಾನಸಭಾ ಸದಸ್ಯರಾದ ಶ್ರೀ ಆರ್. ವೆಂಕಟರಾಮಯ್ಯನವರನ್ನು ದಂಡ ಪ್ರಕ್ರಿಯಾ ಸಂಹಿತೆಯ ೧೫೧ನೇ ಕಲಮಿನ ಮೇರೆಗೆ ಮುಳಬಾಗಿಲಿನಲ್ಲಿ ದಿನಾಂಕ ೯ನೇ ಸೆಪ್ಟೆಂಬರ್ ೧೯೮೭ರಂದು ಮಧ್ಯಾಹ್ನ ೧೨–೩೦ ಗಂಟೆಗೆ ಬಂಧಿಸಿ ಮುಳಬಾಗಿಲು ಆರಕ್ಷಕ ಠಾಣೆಯಲ್ಲಿಟ್ಟುಕೊಂಡು ನಂತರ ಅದೇ ದಿನ ಮಧ್ಯಾಹ್ನ ೨–೧೦ಕ್ಕೆ ಬಿಡುಗಡೆ ಮಾಡಲಾಯಿತು.

ವರದಿ ಸಲ್ಲಿಸಲು ಕಾಲಾವಧಿ ವಿಸ್ತರಣೆಯ ಪ್ರಸ್ತಾವ

೧೯೮೬ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿ ವರದಿ ಸಲ್ಲಿಸಲು ಕಾಲಾವಕಾಶ ವಿಸ್ತರಿಸುವ ಬಗ್ಗೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ೧೯೮೬ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿ ವರದಿಯನ್ನು ಸಲ್ಲಿಸಲು ೧೯೮೮ರ ಜನವರಿ ಅಂತ್ಯದವರೆಗೆ ಕಾಲಾವಧಿ ವಿಸ್ತರಿಸಬೇಕೆಂದು ಕೋರುತ್ತೇನೆ.